ಟೈಮಿರ್ತಿರಲಿಲ್ಲ.'

'ಏನ್ರೀ ಮಧು, ನಾಳೆ ಫುಲ್ ಡೇ ಕ್ಯಾಂಪೇನ್ ಮೆಟೀರಿಲ್ಸ್ ಅಂಟ್ಸೋಕಾಗುತ್ತಾ?' ಅನ್ನೋರು. ಇಲ್ಲ ಸಾರ್ ಫ್ಯಾಕ್ಟರಿ ಡ್ಯೂಟಿ ಅನ್ನುವೆ. ಇದೊಂದಷ್ಟು ಸಾರಿ ಆದಮೇಲೆ ಅವ್ರಿಗೂ ಸಹಜವಾಗೇ ಉದಾಸೀನ ಬಂದಿರಲ್ವೇ? ಆಫೀಸ್ ಹತ್ರ ಕತ್ತುದ್ದ ಮಾಡಿ ನಿಂತಿರ್ತಾನೆ, ಕೆಲಸಕ್ಕೆ ಮಾತ್ರಾ ಸಿಗಲ್ಲ ಅಂತ ಕೊಂಚ ಕಿರಿಕಿರಿ ಆಗೋದು ಸಹಜ ಅಲ್ವೇ?

'ಹೋಗ್ಲಿ ಬಿಡಪ್ಪಾ ಮಧೂ, ಸಂಜೆ ಪ್ರೋಗ್ರಾಮ್ ಹತ್ರ ಬಂದ್ಬಿಡು' ಎನ್ನೋರು, ಅದೂ ವ್ಯಂಗ್ಯದಲ್ಲೇ. ನಂಗೇನೂ ಬೇಜಾರಿರ್ಲಿಲ್ಲ ಕಣೋ. ಅವ್ರು ನೋಡು ಡೆಡಿಕೇಟೆಡ್ ಆಗಿ ಸಂಘಟನೆ ಬೆಳೆಸಿ ಹೋರಾಡೋರು. ನನ್ನಂತೋರನ್ನ ನೆಚ್ಚಿ ಕೆಲಸ ಮಾಡೋಕಾಗಲ್ಲ. ಅಲ್ವೇ?' ಎಂದು ನಿಟ್ಟುಸಿರು ಬಿಟ್ಟ

'ಬಾ!' ಎಂದು ವಿರಾಮ ಕೊಡೋ ತರ ಹೊರಗೆ ಇದ್ದ ಟೀ ಶಾಪಲ್ಲಿ ಟೀ ಹೇಳಿದ. ಟೀ ಕುಡಿದು ಜೇಬಿಂದ ಬೀಡಿ ಕಚ್ಚಿ ತನ್ಮಯವಾಗಿ ಸೇದತೊಡಗಿದ.

'ಮನೇಲಿ ಗೊತ್ತು ಕಣೋ. ಏನೋ ದಿನಕ್ಕೆ ಮೂರೋ ನಾಕೋ ಅಷ್ಟೆ' ಎಂದ ನಗುತ್ತಾ. ಆಮೇಲೆ ಅದೇನೋ ಗುಟ್ಟು ಎಂಬಂತೆ, 'ಕಾರ್ಮಿಕರ ಬ್ರಾಂಡ್ ಇದೇ... ನಂಗೆ ಸಿಗರೇಟು ಅಂದ್ರೆ ಇಷ್ಟ ಕಣೋ. ಸುಡುಗಾಡು ಕಾಸಿಲ್ಲ. ಅದಕ್ಕೇ ಈ ಲೇಬರ್ ಬ್ರಾಂಡು' ಎಂದ

'ಸಿಗರೇಟು ಸೇದ್ತೀಯಾ?' ಎಂದೆ ಜೇಬಿಂದ ದುಡ್ಡು ತೆಗಿತಾ.

ಅವನ ಕಣ್ಣು ಅರಳಿ ನಿಧಾನಕ್ಕೆ ಅದರಲ್ಲಿ ನೀರು ತುಂಬಿತು.

'ಇವತ್ತೇನೋ ನೀನು ಕೊಡಿಸ್ತೀಯಾ! ದಿನಾ ನೀನು ಸಿಗ್ತೀಯಾ? ನಾವಿರೋ ಮಟ್ಟದಲ್ಲೇ ಇರಬೇಕು ಕಣೋ...' ಎಂದ ಎಲ್ಲೋ ನೋಡುತ್ತಾ...

ಮತ್ತೆ ಅದೇ ಕಲ್ಲುಬೆಂಚಿಗೆ ಮರಳಿದೆವು.

'ಆ ಫ್ಯಾಕ್ಟರಿ ಹಾರಿಬಲ್, ಅಲ್ಲಿ ನಮ್ಮಂಥಾ ಆಫೀಸ್ ಕೆಲಸದೋರು ಮಾತ್ರಾ ಮನುಷ್ಯರ ತರ ಡ್ಯೂಟಿ ಮಾಡ್ತಿದ್ದಿದ್ದು. ಪ್ರೊಡಕ್ಷನ್ ಸೈಡು ಇರೋರು ದುಡಿದು ದುಡಿದೂ ಸಾಯೋರು. ಮೋಸ್ಟ್ ಅನ್ ಹೈಜೆನಿಕ್ ಕಣೋ... ನಾನು ನಮ್ಮ ಪಾರ್ಟಿ ಲೀಡರ್ಸ್‌ಗೆ ಹೇಳಿದೆ. ನೀನೇ ಯೂನಿಯನ್ ಕಟ್ಟು, ನಾವು ಬರ್ತೀವಿ ಅಂದ್ರು.

